ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 9-13
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವೇಣು ಗ್ರಾಮದ ಯೋಧರಾಣಿ ಬೆಳವಡಿ ಮಲ್ಲಮ್ಮ

**ವೇಣುಗೋಪಾಲ. ಟಿ.ಪಿ[1] ಮತ್ತು ಡಾ.ಎಸ್.ನಾಗರತ್ನಮ್ಮ[2]**
[1]ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
[2]ಹಿರಿಯ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.

**Abstract:**
*ಭಾರತದ ಚರಿತ್ರೆಯ ಪುಟಗಳಲ್ಲಿ ಎಷ್ಟೋ ರಾಜ–ಮಹಾರಾಜರ ಧೈರ್ಯ, ಸಾಹಸ, ಹೋರಾಟ ಮತ್ತು ದಿಗ್ವಿಜಯಗಳನ್ನು ದಾಖಲಿಸಲಾಗಿದೆ. ಅನೇಕ ಸಾಹಿತ್ಯ ಪುಟಗಳಲ್ಲಿ, ಗದ್ಯ–ಪದ್ಯಗಳಲ್ಲಿ, ಶಾಸನಗಳಲ್ಲಿ ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಹೋರಾಟದ ಚಿತ್ರಣಗಳನ್ನು ಕಣ್ಣಿಗೆ ಕಾಣಿಸುವಂತೆ ಕಟ್ಟಿಕೊಡಲಾಗಿದೆ. ಯುದ್ಧ ಕಲೆಗಳು, ಸೈನ್ಯದ ನೈಪುಣ್ಯತೆ, ದಕ್ಷತೆ, ತಂತ್ರಗಳ ಬಗ್ಗೆ ವೀರಗಲ್ಲುಗಳಲ್ಲಿ, ದೇವಾಸ್ಥಾನಗಳಲ್ಲಿ ಬಿತ್ತಿಚಿತ್ರಗಳ ಮೂಲಕ ಇಂದಿಗೂ ಕಾಣುತ್ತೇವೆ. ಈ ಎಲ್ಲಾ ಚರಿತ್ರೆಯ ಪುಟಗಳಲ್ಲಿ ಪುರುಷನನ್ನು ಪ್ರಧಾನ ವ್ಯಕ್ತಿಯಾಗಿ ತೋರಿಸಿರುವ ಸನ್ನಿವೇಶಗಳೆ ಹೆಚ್ಚಾಗಿ ಕಾಣುತ್ತೇವೆ. ಆದರೆ ಇಂತಹ ಮೇರು ಇತಿಹಾಸವನ್ನು ಹೊಂದಿರುವ ಭಾರತದಲ್ಲಿ ಬೆರಳಣಿಕೆಯಷ್ಟು ಮಾತ್ರ ಕೆಲ ರಾಣಿಯರ ಸಾಹಸ, ಹೋರಾಟದ ಬಗ್ಗೆ ದಾಖಲಿಸಲಾಗಿದೆ. ತಮ್ಮ ಸಾಮ್ರಾಜ್ಯಗಳ ಉಳಿವಿಗೋಸ್ಕರ ತಮ್ಮ ಪ್ರಾಣವನ್ನು ಮುಡಿಪಾಗಿಟ್ಟು ಎಲೆಮರೆ ಕಾಯಿಯಂತೆ ಮುಳುಗಿ ಹೋಗಿರುವ ಎಷ್ಟೋ ವೀರ ಮಹಿಳೆಯರ ಚರಿತ್ರೆಗಳು ಇಂದಿಗೂ ಹೊರ ಬಂದಿಲ್ಲ. ಈ ಹಿನ್ನೆಲೆಯಲ್ಲಿ ವೇಣು ಗ್ರಾಮದ ಯೋಧ ರಾಣಿ ಬೆಳವಡಿ ಮಲ್ಲಮ್ಮನನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಯೋಧರಾಣಿ, ಬೆಳವಡಿ ಮಲ್ಲಮ್ಮ.*

## ಪೀಠಿಕೆ

ಕರ್ನಾಟಕದ ಇತಿಹಾಸವನ್ನು ನೋಡಿದಾಗ ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಹೊಯ್ಸಳರು, ಚಾಲುಕ್ಯರು, ವಿಜಯನಗರ ಸಾಮ್ರಾಜ್ಯಗಳನ್ನು ಆಳ್ವಿಕೆ ಮಾಡಿದ್ದಾರೆ. ಅನೇಕ ಸಣ್ಣ ಪುಟ್ಟ ಸಂಸ್ಥಾನಗಳು ತನ್ನದೇ ಆದ ಶೌರ್ಯ, ಸಾಹಸಕ್ಕೆ ಹೆಸರು ಪಡೆದಿವೆ. ಪುರುಷ ಸಮ್ರಾಜ್ಯದ ಆಳ್ವಿಕೆಗೆ ಸೆಡ್ಡು ಹೊಡೆದು, ವೀರಮಾತೆಯರ, ಸಾಮರ್ಥ್ಯ, ದಿಟ್ಟತನ ಹಾಗೂ ಹೋರಾಟದ ಕುರುಹುಗಳು ಹೊರ ತರದೆ ಇರುವುದು ನೋವಿನ ಸಂಗತಿ ಎಂದೇ ಹೇಳಬಹುದು. ಇಂತಹ ಕೆಲ ಇತಿಹಾಸವನ್ನು ಜನಪದ ಪದ್ಯಗಳ ರೂಪದಲ್ಲಿ ಅಲ್ಪಮಟ್ಟಿಗೆ ತಿಳಿಯುತ್ತೇವೆ. ಮಹನ್ ಚರಿತ್ರೆಯನ್ನು ಹೊಂದಿರುವ ಅನೇಕ ಅರಸು ಮನೆತನಗಳಲ್ಲಿ ಬೆಳವಡಿ ಸಂಸ್ಥಾನವು ಸಹ ಒಂದು. ಈ ಸಂಸ್ಥಾನದ ವೀರರಾಣಿ, ಭಾರತ ಚರಿತ್ರೆಯಲ್ಲಿ ಮೊಟ್ಟಮೊದಲ ಬಾರಿಗೆ ಮಹಿಳಾ ಸೈನ್ಯವನ್ನು ಕಟ್ಟಿದ ಧೀರ ಮಹಿಳೆ ಬೆಳಗಾವಿಯ ಕುಡಿ ಮಲ್ಲಮ್ಮರವರ ಜೀವನ ಚರಿತ್ರೆಯ ಬಗ್ಗೆ ಈ ಲೇಖನದಲ್ಲಿ ವಿವರಿಸಲಾಗಿದೆ.

**Please cite this article as:** ವೇಣುಗೋಪಾಲ. ಟಿ.ಪಿ ಮತ್ತು ಎಸ್. ನಾಗರತ್ನಮ್ಮ. (2025). ವೇಣು ಗ್ರಾಮದ ಯೋಧರಾಣಿ ಬೆಳವಡಿ ಮಲ್ಲಮ್ಮ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(1), 9–13

ಬೆಳಗಾವಿ ಕರ್ನಾಟಕ ರಾಜ್ಯದ ಅತಿ ದೊಡ್ಡ ಜಿಲ್ಲೆ. ಸುಮಾರು 11 ತಾಲೂಕುಗಳನ್ನು ಹೊಂದಿರುವ ಈ ಜಿಲ್ಲೆಯನ್ನು ಬಿದುರಿನ ನಗರ, ವೇಣುಗ್ರಾಮ ಮತ್ತು ಕರ್ನಾಟಕದ ಸಕ್ಕರೆಯ ಜಿಲ್ಲೆ ಎಂಬ ಹೆಸರಿನಿಂದ ಕರೆಯುತ್ತಾರೆ. ಬೆಳವಡಿ ಗ್ರಾಮವು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಿಂದ ಸುಮಾರು 16 ಕಿ.ಮೀ ದೂರದಲ್ಲಿರುವ ಒಂದು ಗ್ರಾಮ. ಬೆಳವಡಿ ಅಂದರೆ "ಬೆಳಕಿನ ಹಾದಿ" ಎಂದರ್ಥ.

ವೇಣುಗ್ರಾಮ ಎಂದು ಚರಿತ್ರೆ ಹೊಂದಿರುವ ಬೆಳಗಾವಿ ಇತಿಹಾಸವನ್ನು ತೆರೆದಾಗ, ಬೆಳವಡಿ ಸಂಸ್ಥಾನದ ಪಾರಂಪರಿಕ ತಾಣವಾದ ಬೃಹನ್ಮಠದ ಶಿವ ಬಸವಶಾಸ್ತ್ರಿಯವರು ಬರೆದಿರುವ "ತರಾತುರಿ ಪಂಚಮರ ಇತಿಹಾಸ" ಎಂಬ ಪುಸ್ತಕದಲ್ಲಿ ಬೆಳವಡಿಯ ಸಂಸ್ಥಾನದ ಇತಿಹಾಸವು 1511ರಲ್ಲಿ ರಾಜ ಚಂದ್ರಶೇಖರ ಅರಸನೊಂದಿಗೆ ಪ್ರಾರಂಭವಾಗುತ್ತದೆ, ಇವರು ವಿಜನಗರದ ಸಾಮಂತ ರಾಜನಾಗಿದ್ದ, ಮುಂದೆ ವಿಜಯನಗರ ಸಾಮ್ರಾಜ್ಯ ಪತನ ನಂತರ ಸ್ವತಂತ್ರ್ಯ ಸಂಸ್ಥಾನವಾಗಿ ಹೊರ ಹೊಮ್ಮಿತು ಎಂದು ತಿಳಿಸಲಾಗಿದೆ. ಈ ಗ್ರಂಥ 1929 ರಲ್ಲಿ ಪ್ರಕಟವಾಯಿತು. ರಾಣಿ ಮಲ್ಲಮ್ಮಳ ಮೂಲವನ್ನು ಶೋಧಿಸಿದಾಗ, ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸೊಂದ ಗ್ರಾಮದ ಸೋದೆ ಮನೆತನದ ರಾಜ ಮದಲಿಂಗ ನಾಯಕ ಮತ್ತು ವೀರಮ್ಮಾಜಿ ದಂಪತಿಗೆ ಮಕ್ಕಳಿಲ್ಲ ಎಂದು ಸೊಪ್ಪಿ ಸಿದ್ದಬಸವ ಎಂಬ ಮಹಾಯೋಗಿಯ ಸಲಹೆಯಂತೆ ವ್ರತಚಾರಣೆಯಿಂದ ಸದಾಶಿವ ನಾಯಕ ಎಂಬ ಮಗು ಜನಿಸುತ್ತದೆ. ಅದಾಗಿ ಎರಡು ವರ್ಷಗಳ ನಂತರ ಅಂದರೆ ಕ್ರಿ.ಶ 1650ರಲ್ಲಿ ಮಲ್ಲಮ್ಮ ಜನಿಸುತ್ತಾಳೆ. ಹುಟ್ಟಿನಿಂದಲೂ ತುಂಬಾ ಸುಂದರವತಿಯಾಗಿದ್ದ ಮಲ್ಲಮ್ಮ ಚಾಣಾಕ್ಷಳು, ಅಪಾರ ಬುದ್ಧಿವಂತೆ, ಒಳ್ಳೆಯ ಮಾತುಗಾರ್ತಿಯಾಗಿದ್ದಳು.

ರಾಜಮನೆತನದ ಕುಡಿಯಾಗಿದ್ದರಿಂದ ಶಂಕರಭಟ್ ಗುರುಕುಲದಲ್ಲಿ 12 ವರ್ಷಗಳ ಕಾಲ ತನ್ನ ಅಣ್ಣನೊಂದಿಗೆ ಶಿಕ್ಷಣ ಪಡೆದು, ಇವರಿಗೆ ವಿದ್ಯೆ ಕಲಿಸಲು 10 ಜನ ಹಿರಿಯ ಶಾಸ್ತ್ರೀಯ ಶಿಕ್ಷಕರು ಇದ್ದರು. ಇಬ್ಬರೂ ಕನ್ನಡ, ಸಂಸ್ಕೃತ, ಮರಾಠ ಮತ್ತು ಉರ್ದು ಬಾಷೆಯಲ್ಲಿ ಪಾಂಡಿತ್ಯ ಪಡೆದರು. ಇವರು ಇಬ್ಬರೂ ಕನ್ನಡ ಮತ್ತು ಸಂಸ್ಕೃತದಲ್ಲಿ ಸಾಹಿತ್ಯ ರಚನೆ ಮಾಡುವಷ್ಟರ ಮಟ್ಟಿಗೆ ಪರಿಣಿತಿ ಹೊಂದಿದ್ದರು. ಮಲ್ಲಮ್ಮಳ ಸಾಹಿತ್ಯ ದೊರೆಯದಿದ್ದರೂ, ಅಣ್ಣ ಸದಾಶಿವ ನಾಯಕನ ಭಜನೆ ಪದಗಳು ಮತ್ತು ಶೃಂಗಾರದ ಜಾವಡಿಗಳು ದೊರೆತಿವೆ. ಅಕ್ಷರಭ್ಯಾಸ ಜೊತೆಗೆ ತಂದೆ ಮಧುಲಿಂಗ ನಾಯಕ ತನ್ನ ಮಕ್ಕಳು ಯುದ್ಧ ನೈಪುಣ್ಯತೆಯನ್ನು ಕಲಿಯಲು ಉತ್ತರಭಾರತದ ಸಿಖ್ ಜನಾಂಗಕ್ಕೆ ಸೇರಿದ 'ರಣವೀರ್ ಸಿಂಗ್' ಎಂಬುವರನ್ನು ನೇಮಿಸುತ್ತಾನೆ. ಈತನ ಮಾರ್ಗದರ್ಶನದಿಂದ ಮಲ್ಲಮ್ಮ ತನ್ನ ಯೌವ್ವನ ವ್ಯವಸ್ಥೆಯಲ್ಲಿ, ಒಳ್ಳೆ ಬಿಲ್ಲುಗಾರ್ತಿ, ಖಡ್ಗ ಪ್ರಯೋಗಿ, ಭರ್ಜಿ ಎಸೆತ ಹಾಗೂ ಕುದುರೆ ಸಾವರಿಯಲ್ಲಿ ಪುರುಷರಿಗೆ ಸರಿಸಾಟಿಯಾದ್ದಳು. ಈ ಕಾಲದಲ್ಲಿ ಪುರುಷರು ಯುದ್ಧಕ್ಕೆ ಹೋದಾಗ ಮಹಿಳೆಯರು ಎರಡನೇ ಸಾಲಿನಲ್ಲಿ ರಕ್ಷಣೆಗೆ ಸಿದ್ಧರಾಗಿರಬೇಕಿತ್ತು. ಆದರಿಂದ ರಾಜಮನೆತನದ ಪುರುಷ ಮತ್ತು ಮಹಿಳೆಯರಿಬ್ಬರು ಲಲಿತಕಲೆ ಮತ್ತು ಯುದ್ಧ ತರಬೇತಿಯನ್ನು ಪಡೆಯುತ್ತಿದ್ದರು. ಈ ಮಾಹಿತಿಯನ್ನು ಡಾ. ಶ್ರೀನಿವಾಸ್ ಹಾವನೂರ್ ರವರು ಮರಾಠಿ ಹಸ್ತಪ್ರತಿಯಲ್ಲಿ ಉಲ್ಲೇಖಿಸಿದ್ದಾರೆ. ತನ್ನ ಶಸ್ತ್ರ ನೈಪುಣ್ಯತೆಯಿಂದ ಯುದ್ಧರಂಗಕ್ಕೆ ಇಳಿದರೆ ರಣಚಂಡಿಯಂತೆ ಹೋರಾಡುತ್ತಿದ್ದಳು ಎಂದು ದಾಖಲೆಗಳು ತಿಳಿಸುತ್ತವೆ. ಪುರುಷನಂತೆ ಬೆಳೆದ ಮಲ್ಲಮ್ಮ ಯುದ್ಧಕಲೆಯಲ್ಲದೆ, ಮಹಾನ್ ಹರಭಕ್ತೆಯಾಗಿದ್ದಳು. ಇವಳ ಭಕ್ತಿ ಎಷ್ಟರ ಮಟ್ಟಿಗಿತ್ತೆಂದರೆ ಹರಪೂಜೆ, ಗುರು ಸೇವೆ ಮಾಡದೆ ಒಂದು ಹನಿ ನೀರನ್ನು ಸೇವಿಸುತ್ತಿರಲಿಲ್ಲ. ದೈವ ಭಕ್ತಿಗೆ ತುಂಬಾ ನಿಷ್ಠೆಯಿಂದ ಇರುತ್ತಿದ್ದಳು.

ಮಲ್ಲಮ್ಮಗೆ 16ನೇ ವಯಸ್ಸಿನಲ್ಲಿ ಸ್ವಯಂವರವನ್ನು ಏರ್ಪಡಿಸುತ್ತಾನೆ. ಇದಕ್ಕೆ ಮಲ್ಲಮ್ಮ ತನ್ನ ಬೇಡಿಕೆಯನ್ನು "ನನ್ನ ವಯಸ್ಸಿನಷ್ಟು ಹುಲಿಗಳನ್ನು ಒಂದು ತಿಂಗಳ ಒಳಗೆ ಯಾರು ಭೇಟೆಯಾಡಿ ಸಾಯಿಸುತ್ತಾರೋ ಅವರನ್ನು ನಾನು ವಿವಾಹವಾಗುತ್ತೇನೆ" ಎಂದು ಸಾರಿದಳು[1]. ಕಾರಣ ಮಲ್ಲಮ್ಮ ಹುಲಿ ಭೇಟೆಯಲ್ಲಿ ನಿಪುಣಳಾಗಿದ್ದಳು. ಇದನ್ನು ಅರಿತ ಬೆಳವಡಿಯ ರಾಜಕುಮಾರ ಈಶಪ್ರಭು ದೇಸಾಯಿ ತನ್ನ ಸಾಮರ್ಥ್ಯದಿಂದ 21 ಹುಲಿಗಳನ್ನು ಕೊಂದು ಮಲ್ಲಮ್ಮಳನ್ನು ವಿವಾಹ ವಾಗುತ್ತಾನೆ. ಇವರಿಬ್ಬರು ಧೈರ್ಯ್ಯ, ಸಾಹಸಕ್ಕೆ ಹೆಸರು ಪಡೆದಿದ್ದರು, ಸಾವಿಗೆ ಅಂಜದೆ ಶತ್ರುಗಳ ಎದೆಯನ್ನು ನಡಿಗಿಸುವ ಸಾಮರ್ಥ್ಯ ಇವರಲ್ಲಿತ್ತು. ಈಶಪ್ರಭುವನ್ನು ತನ್ನ ಸಂಸ್ಥಾನದಲ್ಲಿ "ಹೆಬ್ಬುಲಿ" ಎಂದು ಕರೆಯುತ್ತಿದ್ದರು.

ವಿವಾಹ ನಂತರದಲ್ಲಿ ಮಲ್ಲಮ್ಮ ಬೆಳವಡಿಯ ಸಂಸ್ಥಾನದಲ್ಲಿ ತನ್ನ ಪತಿಯ ಜೊತೆ ವಾಸವಾಗುತ್ತಾಳೆ. ಈ ಸಂದರ್ಭದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವೆ ಸಾಮರಸ್ಯದ ಕೊಂಡಿಯಾಗಿ ಮಲ್ಲಮ್ಮ ನಿಂತಳು. ಬ್ರಿಟಿಷರ ಆಳ್ವಿಕೆಯ ಬಗ್ಗೆ ತಿಳಿದಿದ್ದ ಇವರು ಸ್ವರಾಜ್ಯ ರಾಷ್ಟ್ರ ನಿರ್ಮಾಣ ಮಾಡಬೇಕೆಂಬ ಗುರಿ ಹೊಂದಿದ್ದರು. ಹಿಂದೂ ಸಾಮ್ರಾಜ್ಯದ ಪುನರ್ ಸ್ಥಾಪಕನೆಂದೆ ಪ್ರಸಿದ್ಧಿ ಪಡೆದಿರುವ ವೀರ ಮಹಾರಾಜ ಛತ್ರಪತಿ ಶಿವಾಜಿರವರು ಕ್ರಿ.ಶ 1676–78 ರಲ್ಲಿ ದಕ್ಷಿಣದ ಕೆಲ ಪ್ರದೇಶಗಳ ಮೇಲೆ ದಾಳಿ ಮಾಡಿದನು. ಅನೇಕ ಪ್ರದೇಶಗಳನ್ನು ಗೆದ್ದು, ಕರ್ನಾಟಕದ ಮೇಲೆ ದಂಡಯಾತ್ರೆ ಕೈಗೊಳ್ಳುತ್ತಾನೆ. ತುಂಗಭದ್ರ ನದಿಯನ್ನು ದಾಟಿ ಕೊಪ್ಪಳದ ಕೋಟೆ ಗೆದ್ದು ಗದಗ, ಮೂಲಕ ಲಕ್ಷ್ಮೇಶ್ವರವನ್ನು ತಲುಪಿ, ಧಾರವಾಡದ ಹತ್ತಿರವಿರುವ ಹಾಗೂ ಬೆಳವಾಡಿ ಸಂಸ್ಥಾನಕ್ಕೆ ಸೇರಿದ ಯಾದವಾಡದಲ್ಲಿ ಬಿಡಾರ ಹೂಡುತ್ತಾರೆ. ಇದನ್ನು ತಿಳಿದ ಈಶಪ್ರಭು ದೇಸಾಯಿಗೆ ಶಿವಾಜಿಯನ್ನು ಸತ್ಕರಿಸಬೇಕೆನ್ನುವ ಆಸೆ ಹುಟ್ಟುತ್ತದೆ. ಅದಕ್ಕಾಗಿ ಎಲ್ಲಾ ಸಿದ್ಧತೆ ಮಾಡಿಕೊಳ್ಳುತ್ತಾನೆ.

ಈ ಸಂದರ್ಭದಲ್ಲಿ ಯಾದವಾಡದಲ್ಲಿ ಬೀಡು ಬಿಟ್ಟಿದ ಶಿವಾಜಿ ಸೈನಿಕರು ಬೆಳವಡಿಯ ಹತ್ತಿರವಿದ್ದ ಗೋಶಾಲೆಗೆ ಹೋಗಿ ಗೋಪಾಲಕರನ್ನು ಹಾಲು ಕೇಳುತ್ತಾರೆ. ಆದರೆ ಅವರಿಗೆ ಕೊಡುವಷ್ಟು ಹಾಲು ಗೋಪಾಲಕರ ಬಳಿ ಇರುವುದಿಲ್ಲ. ಇದರಿಂದ ಸಿಟ್ಟಿಗೆದ್ದ ಶಿವಾಜಿ ಸೈನಿಕರು ಬೆಳವಾಡಿಯ ಗೋವುಗಳನ್ನು ವಶಪಡಿಸಿಕ್ಕೊಳ್ಳುತ್ತಾರೆ. ಇದನ್ನು ತಿಳಿದ ಬೆಳವಾಡಿಯ ರಾಣಿ ಮಲ್ಲಮ್ಮ ರವರು ಕೆರಳುತ್ತಾರೆ. ಏಕೆಂದರೆ ಹಿಂದುಗಳಿಗೆ ಗೋವುಗಳೆಂದರೆ ಸಾಕ್ಷಾತ್ ತಾಯಿ ರೂಪದಲ್ಲಿ ಕಾಣುತ್ತಾರೆ. ಅದರಲ್ಲೂ ಕೃಷಿಕ ಪಂಚಮಸಾಲಿಗಳಿಗೆ ಗೋವುಗಳೆಂದರೆ ಪಂಚಪ್ರಾಣ. ಈಶಪ್ರಭು ಶಿವಾಜಿ ಸೈನಿಕರ ಆಕ್ರಮಣದಿಂದ ಕುಪಿತನಾಗಿ ಗೋವುಗಳನ್ನು ಮರಳಿ ಪಡೆಯಲು ದಂಡನಾಯಕನಾದ ಸಿದ್ಧನಗೌಡ ಪಾಟೀಲನನ್ನು ಮಾತುಕತೆಗೆ ಕಳಿಸಿದಾಗ, ಶಿವಾಜಿ ಸೈನ್ಯದ ದಂಡನಾಯಕ ಸಕುಜಿಯಿಂದ ಹತನಾಗುತ್ತಾನೆ. ಈ ವಿಷಯ ತಿಳಿದು ಸಿಟ್ಟಿಗೆದ್ದ ಈಶಪ್ರಭು ಶಿವಾಜಿಯ ಸೈನ್ಯದ ಮೇಲೆ ಯುದ್ಧಕ್ಕೆ ಸಿದ್ದನಾಗುತ್ತಾನೆ. ಇದನ್ನು ಗಮನಿಸಿದ ಮಲ್ಲಮ್ಮ ನೀವು ಯುದ್ಧಕ್ಕೆ ಹೋಗಬೇಡಿ ಗೋವುಗಳು ಮಾತೆಯಾದರಿಂದ ಅವುಗಳ ರಕ್ಷಣೆಗೆ ನಾನೇ ಹೊರಡುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾಳೆ. ಇವರ ವಿರುದ್ಧ ಹೋರಾಡಲು ಮಲ್ಲಮ್ಮ 500 ವರ್ಷಗಳ ಹಿಂದೆಯೇ ಬೆಳವಾಡಿ ಸಂಸ್ಥಾನದಲ್ಲಿ ಒಂದು ಸ್ತ್ರೀಸೈನ್ಯ ವಿತ್ತು. ಈ ಸ್ತ್ರೀ ಸೈನ್ಯವನ್ನು ಪುನರ್ ಸಂಘಟಿಸಿ 2,000 ವೀರ ಮಾತೆಯರನ್ನು ಸಿದ್ಧಗೊಳಿಸಿ ಒಂದು ನಿಪುಣ ಸೈನ್ಯ ಕಟ್ಟುತ್ತಾಳೆ[2]. ಈ ಸೈನ್ಯ ಭಾರತದಲ್ಲಿ ಮೊಟ್ಟಮೊದಲ ಮಹಿಳಾ ಸೈನ್ಯವಾಗಿ ಚರಿತ್ರೆಯ ದಾಖಲೆಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲಾಗಿದೆ. ಇಂತಹ

[1] ಶ್ರೀನಿವಾಸ್ ಹಾವನೂರು–*ಮರಾಠಿ ಹಸ್ತಪ್ರತಿಗಳು.*

[2] ಶಿವಬಸಪ್ಪಶಾಸ್ತ್ರೀ. (20ನೇ ಶತಮಾನ). *ತರಟೂರಿ ಪಂಚಮರ ಇತಿಹಾಸ.*

ನಿಪುಣ ಸ್ತ್ರೀ ಸೈನ್ಯವನ್ನು ತೆಗೆದುಕೊಂಡು ರಣಚಂಡಿಯಂತೆ ಮರಾಠರ ಸೈನ್ಯವನ್ನು ಸೋಲಿಸಿ, ಗೋವುಗಳನ್ನು ತನ್ನ ಸಾಮ್ರಾಜ್ಯಕ್ಕೆ ಕರೆದುಕೊಂಡು ಬರುತ್ತಾಳೆ. ಅಂದು ಬೆಳವಡಿಮಲ್ಲಮ್ಮನ ಸಾಹಸ ವಿಜಯೋತ್ಸವ ಬೆಳವಡಿಯಲ್ಲಿ ಮೊಳಗಿತು.

ಈ ಸಂದರ್ಭದಲ್ಲಿ ಶಿವಾಜಿ ಸೈನ್ಯದ ದಂಡನಾಯಕ ಸಕ್ಕುಜಿ ಶಿವಾಜಿಯನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಾನೆ. ನಮ್ಮ ಮೇಲೆ ಯುದ್ಧ ಮಾಡಿ ನಮ್ಮ ಗೋವುಗಳನ್ನು ಬೆಳವಡಿ ಸಂಸ್ಥಾನದವರು ಕದ್ದೊಯ್ದರು ಎಂದು ಹೇಳುತ್ತಾನೆ. ನಾವು ಬೆಳವಡಿಯ ಮೇಲೆ ಯುದ್ಧ ಸಾರಿ ನಮ್ಮ ಗೋವುಗಳನ್ನು ಮರಳಿ ಪಡೆಯಬೇಕು ಎಂದು ಯುದ್ಧಕ್ಕೆ ಸಿದ್ಧತೆ ಮಾಡುತ್ತಾನೆ. ಈ ಯುದ್ಧ ಶಿವಾಜಿ ಸೈನ್ಯ ಮತ್ತು ಬೆಳವಡಿಯ ಸೈನ್ಯದ ನಡುವೆ 27 ದಿನಗಳ ಕಾಲ ನಡೆಯಿತು[3]. ಈ ಯುದ್ಧದಲ್ಲಿ ಈಶಪ್ರಭುಗೆ ಗಾಯವಾಗಿ ಕುದುರೆಯಿಂದ ಬಿದ್ದು ಗಾಯಗೊಳ್ಳುತ್ತಾನೆ. ಅಷ್ಟೊತ್ತಿಗೆ ಹುಲಿ ಸೈನ್ಯ ಎಂದು ಹೆಸರು ಪಡೆದಿರುವ ಒಂದು ಸೈನ್ಯ ಬೆಳವಾಡಿಯ ಸೈನಿಕರ ಜೊತೆ ಸೇರಿ ಕಾದಾಡುತ್ತದೆ. ಇದರಿಂದ ಹೆದರಿದ ಮರಾಠ ಸೈನ್ಯ ಅಲ್ಲಿಂದ ಕಾಲು ಕೀಳುತ್ತದೆ. ನಂತರ ಸ್ವಲ್ಪ ದಿನಗಳಲ್ಲಿ ಗಾಯಗೊಂಡಿದ್ದ ಈಶಪ್ರಭು ಮರಣ ಹೊಂದುತ್ತಾನೆ. ಇದರಿಂದ ಬೆಳವಾಡಿಯ ಸಂಪೂರ್ಣ ಜವಾಬ್ದಾರಿ ಮಲ್ಲಮ್ಮರವರಿಗೆ ಬೀಳುತ್ತದೆ. ಈ 27 ದಿನಗಳ ಯುದ್ಧದ ಬಗ್ಗೆ ಇತಿಹಾಸಕಾರ ಜಾದುನಾಥ್ ಸರ್ಕಾರ್ ರವರು ಬರೆದ "ಶಿವಾಜಿ ಅಂಡ್ ಹಿಸ್ ಟೈಮ್ಸ್" ಎಂಬ ಕೃತಿಯಲ್ಲಿ ದಾಖಲಿಸಲಾಗಿದೆ.

ಪತಿಯ ಮರಣದ ನಂತರ ಮಲ್ಲಮ್ಮ ತನ್ನ ಚಾಣಾಕ್ಷತನದಿಂದ ಬೆಳವಾಡಿಯ ಸರದಾರನನ್ನು, ಸನ್ಯಾಸಿಯ ವೇಷ ಧರಿಸಿ ಶಿವಾಜಿಯ ಬಳಿಗೆ ಕಳಿಸುತ್ತಾಳೆ. ಈತ ಶಿವಾಜಿ ಬಳಿ ಹೋಗಿ ಸಿದ್ಧಸಮುದ್ರದಲ್ಲಿ ತಾಯಿ ದ್ಯಾಮವ್ವ ನೆಲೆಸಿದ್ದಾಳೆ, ಅವಳ ದರ್ಶನದಿಂದ ನಿಮ್ಮ ಸಾಮ್ರಾಜ್ಯಕ್ಕೆ ನಿಮಗೆ ಒಳಿತಾಗುತ್ತದೆ ಎಂದು ಹೇಳುತ್ತಾನೆ. ಇದನ್ನು ನಂಬಿದ ಶಿವಾಜಿ ದ್ಯಾಮವ್ವನ ಗುಡಿಗೆ ತನ್ನ ಕೆಲ ಸೈನಿಕರೊಂದಿಗೆ ಹೋಗುತ್ತಾನೆ. ಈ ವಿಷಯವನ್ನು ಶಾಂತಯ್ಯ ಮಲ್ಲಮ್ಮಗೆ ತಿಳಿಸಿದ ನಂತರ ಮಲ್ಲಮ್ಮ ಶಿವಾಜಿಯ ವಿರುದ್ಧ ಸೇಡು ತೀರಿಸಿಕೊಳ್ಳಲು ತನ್ನ 2000 ಮಹಿಳಾ ಸೈನ್ಯದೊಂದಿಗೆ ಬಿರುಗಾಳಿಯಂತೆ ನುಗ್ಗುತ್ತಾಳೆ. ಮಲ್ಲಮ್ಮಳ ಈ ದಾಳಿಗೆ ಶಿವಾಜಿಗೆ ದಿಕ್ಕು ತೋಚದೆ ಕಂಗಾಲಾಗುತ್ತಾನೆ. ಮಲ್ಲಮ್ಮ ರಣಚಂಡಿಯಂತೆ ತನ್ನತ್ತ ಶರವೇಗದಲ್ಲಿ ನುಗ್ಗಿ ಬರುವುದನ್ನು ನೋಡಿದ ಶಿವಾಜಿ ಸೈನಿಕರು ಆಕೆಯ ಕುದುರೆ ಕಾಲುಗಳನ್ನು ಕತ್ತರಿಸುತ್ತಾರೆ. ಕುದುರೆ ಬಿದ್ದರೂ ಮಲ್ಲಮ್ಮ ತನ್ನ ಖಡ್ಗವನ್ನು ಬಿಡುವುದಿಲ್ಲ ರಣ ಭೀಕರವಾಗಿ ಹೋರಾಡುತ್ತಾಳೆ. ಇದನ್ನು ಕಂಡ ಶಿವಾಜಿ ಈಕೆ ಮನುಷ್ಯಳಲ್ಲ ಸಾಕ್ಷಾತ್ ಜಗದಾಂಬೆ ತುಳಜಾ ಭವಾನಿಯೆ ಸರಿ ಎಂದು ತಾನೇ ಕುದುರೆಯಿಂದ ಕೆಳಗಿಳಿದು "ಜಗದಂಬಾ ಮಾಂ ಪಾಹಿ ಪಾಹಿ ಚಾರು ಕುಮುದಾಕ್ಷಿ ಘನಮುಕ್ತಿ ಸುಕಾಮಿಹ ದೇಹಿ" ಎಂದು ಸ್ತುತಿಸುತ್ತಾನೆ. ನನ್ನ ಈ ಅಪರಾಧವನ್ನು ಕ್ಷಮಿಸು ತಾಯಿ ಎಂದು ದೀನನಾಗಿ ಬೇಡಿಕೊಳ್ಳುತ್ತಾನೆ. ಆಗ ಮಲ್ಲಮ್ಮ ಶಿವಾಜಿಗೆ ಪ್ರಾಣಬೀಕ್ಷೆ ನೀಡಿ ಕ್ಷಮಿಸುತ್ತಾಳೆ[4].

ಶಿವಾಜಿ ತನ್ನ ತಪ್ಪನ್ನು ಅರಿತ ನಂತರ ಗೂಢಾಚಾರಿಗಳಿಂದ ಘಟನೆಗಳನ್ನು ಪರಿಶೀಲಿಸಿ, ವಿನಾಕಾರಣ ಯುದ್ಧಕ್ಕೆ ಸುಕುಜಿಯೇ ಕಾರಣ ಎಂದು, ಆತನ ಕಣ್ಣು ಕೀಳಿಸಿ, ಆನೆ ಕಾಲಿನಿಂದ ತುಳಸಿ ಸಾಯಿಸುತ್ತಾನೆ. ಯುದ್ಧದಿಂದಾಗಿ ಹಾನಿಯಾದ ಬೆಳವಡಿ ಕೋಟೆಯ ಪುನರ್ ನಿರ್ಮಾಣದ ವೆಚ್ಚವನ್ನು ಸ್ವತಃ ಶಿವಾಜಿಯೇ ಭರಿಸುತ್ತಾನೆ. ರಾಣಿ ಮಲ್ಲಮ್ಮಳನ್ನು ತನ್ನ ತಂಗಿ ಎಂದು, ರಾಣಿ ಮಲ್ಲಮ್ಮ ಶಿವಾಜಿ ತನ್ನ ಅಣ್ಣ ಎಂಬ ಸಂಬಂಧ ದ್ಯೋತಕವಾಗಿ ಶಿವಾಜಿ ಕೈಗೆ ರಕ್ಷೆ ಕಟ್ಟುತ್ತಾಳೆ. ನಂತರ ಮಲ್ಲಮ್ಮನ

[3] ಜಾದುನಾಥ್ ಸರ್ಕಾರ್. (2010). ಶಿವಾಜಿ ಅಂಡ್ ಹಿಸ್ ಟೈಮ್. ಪುಟ. 213.

[4] ಶಂಕರಭಟ್ಟ. (19ನೇ ಶತಮಾನ). ಶಿವವಂಶ ಸುಧರ್ನವ. ಪುಟ. 147–149.

ಮಗ ನಾಗಭೂಷಣ ರವರನ್ನು ಪಟ್ಟಾಭಿಷೇಕವನ್ನು ಸ್ವತಃ ಶಿವಾಜಿಯೆ ಮಾಡಿಸುತ್ತಾನೆ[5]. ಬೆಳವಡಿ ಮತ್ತು ಮರಾಠ ರಾಜಮನೆತನ ನಡುವೆ ಗಾಢವಾದ ಸ್ವರಾಜ್ಯ ರಾಷ್ಟ್ರ ನಿರ್ಮಾಣ ಸಂಕಲ್ಪ ಬೆಳೆಯುತ್ತದೆ.

ಇವೆಲ್ಲಾ ಸಂದರ್ಭಗಳ, ಕಾಲ ನಂತರದಲ್ಲಿ ಮಲ್ಲಮ್ಮ ರವರು 67ನೇ ವಯಸ್ಸಿನಲ್ಲಿ ಅಂದರೆ ಫೆಬ್ರವರಿ 19, 1717ರಲ್ಲಿ ಮರಣ ಹೊಂದುತ್ತಾಳೆ. ಜಗತ್ತಿನ ಮೊದಲ ಮಹಿಳಾಸೇನವನ್ನು ಕಟ್ಟಿದ ಮಲ್ಲಮ್ಮಾಜಿ ಶಾಸ್ತ್ರ, ಸಂಪ್ರದಾಯಗಳಲ್ಲಿ ಮುಳುಗೇಳುತಿದ್ದ, ಆಗಿನ ತಾಯಂದಿರ ಕೈಯಲ್ಲಿ ಶಸ್ತ್ರ ಶಕ್ತಿಯನ್ನು ತುಂಬಿದ ಛಲಗಾತಿಯಾಗಿದ್ದಳು. ಆಕೆ ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವೆ ಸಮರಸದ ಕೊಂಡಿಯಾಗಿದ್ದಳು. ಫೆಬ್ರವರಿ 28 ರಂದು ವೀರಮಾತೆ ಬೆಳವಡಿ ಮಲ್ಲಮ್ಮ ರವರು ವಿಜಯೋತ್ಸವ ದಿನ ಆಚರಿಸಿ ಆಕೆಯನ್ನು ಸ್ಮರಿಸುತ್ತಾರೆ. ಬೆಳವಡಿ ರಾಣಿ ಮಲ್ಲಮ್ಮ ನಮ್ಮ ನಾಡಿನ ಹೆಮ್ಮೆಯ ಪುತ್ರಿ ಎಂದು ಹೇಳಬಹುದು.

ಮಹಾರಾಷ್ಟ್ರದ ಸರ್ಕಾರಿ ಶಾಲೆಯಲ್ಲಿ ನಾಲ್ಕನೇ ತರಗತಿ ಪಠ್ಯದಲ್ಲಿ ಮಲ್ಲಮ್ಮನ ಕುರಿತು ಮಕ್ಕಳಿಗೆ ಬೋಧಿಸಲಾಗುತ್ತಿದೆ. ಆದರೆ ಈ ಪಠ್ಯದಲ್ಲಿ ಮಲ್ಲಮ್ಮಳ ಸಾಹಸವನ್ನು ಬೋಧಿಸದೆ ಶಿವಾಜಿಯು ಮಹಿಳೆಯರೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದ ಎಂಬ ಉದಾಹರಣೆಯಾಗಿ ಮಲ್ಲಮ್ಮಳನ್ನು ದಾಖಲಿಸಲಾಗಿದೆ. ಜೊತೆಗೆ ಬೆಳವಾಡಿಯ ಕೋಟೆಗೆ ಮರಾಠ ಸೇನೆಯು ಮುನ್ನುಗ್ಗಿ ಮಲ್ಲಮ್ಮಳ ಸೇನೆಯನ್ನು ಸೋಲಿಸುತ್ತದೆ. ಆದರೆ ಮಲ್ಲಮ್ಮಳ ಧೈರ್ಯ, ಸಾಹಸ ಮತ್ತು ಶೌರ್ಯವನ್ನು ಶಿವಾಜಿ ಮೆಚ್ಚಿ, ಮಲ್ಲಮ್ಮಳನ್ನು ಅರಮನೆಗೆ ಕರೆಸಿಕೊಂಡು ಸನ್ಮಾನಿಸಿ, ಮಲ್ಲಮ್ಮಗೆ 'ಸಾವಿತ್ರಿ' ಬಿರುದು ನೀಡಿ ತನ್ನ ಸೈನಿಕರೊಂದಿಗೆ ಭದ್ರವಾಗಿ ಬೆಳವಾಡಿಗೆ ಮರಳಿ ಕಳಿಹಿಸುತ್ತಾನೆ ಎಂಬ ಉಲ್ಲೇಖ ಈ ಪಠ್ಯದಲ್ಲಿದೆ.

ಕರ್ನಾಟಕದಲ್ಲಿ ಪಠ್ಯ ಪರಿಷ್ಕರಣೆಯ ಸಂದರ್ಭದಲ್ಲಿ ಅನೇಕ ಭಾರತೀಯ, ಕರ್ನಾಟಕ ಇತರೆ ರಾಜ್ಯಗಳ ಕೆಲ ಇತಿಹಾಸಕಾರರ ಜೀವನ ಚಿತ್ರಣಗಳು, ಅವರ ಸಾಧನೆಗಳ ಬಗ್ಗೆ ಪಠ್ಯಪುಸ್ತಕಗಳಲ್ಲಿ ಸೇರಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಪಠ್ಯ ಪರಿಷ್ಕರಣೆಯ ವಾದವಿವಾದಗಳು ನಡೆಯುತ್ತವೆ. ಇಂತಹ ಸಂದರ್ಭದಲ್ಲಿ ಕರ್ನಾಟಕದ ಹೆಮ್ಮೆಯ ಪುತ್ರಿ ಧೀರ ಮಹಿಳೆ, ಭಾರತದಲ್ಲೇ ಪ್ರಪ್ರಥ ಬಾರಿಗೆ ಮಹಿಳಾ ಸೈನ್ಯವನ್ನು ಕಟ್ಟಿದ ನಮ್ಮ ರಾಜ್ಯದ ಬೆಳವಡಿ ಮಲ್ಲಮ್ಮ ರವರ ಇತಿಹಾಸವನ್ನು ಸೇರಿಸದಿರುವುದು ನೋವಿನ ಸಂಗತಿ ಎಂದೇ ಹೇಳಬಹುದು. ಇತ್ತೀಚೆಗೆ ಬೆಳವಡಿ ಗ್ರಾಮಸ್ಥರು ಮತ್ತು ರಾಜ್ಯದ ಅನೇಕ ಸಂಘಟನೆಗಳು ಬೆಳವಡಿ ರಾಣಿ ಮಲ್ಲಮ್ಮನ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡುವಂತೆ ಒತ್ತಾಯಿಸಿದ್ದಾರೆ. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳವಡಿ ಮಲ್ಲಮ್ಮಳ ಅಧ್ಯಯನ ಪೀಠ ರಚನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯ ಪಠ್ಯಪುಸ್ತಕಗಳಲ್ಲಿ, ಚರಿತ್ರೆಯ ಕೃತಿಗಳಲ್ಲಿ ಇಂತಹ ಧೀರ ಮಹಿಳೆಯರ ಇತಿಹಾಸವನ್ನು ಬೆಳಕಿಗೆ ತರಬೇಕೆಂದು ನನ್ನ ಈ ಲೇಖನದ ಉದ್ದೇಶವಾಗಿದೆ.

**ಪರಾಮರ್ಶನ ಗ್ರಂಥಗಳು**


- ಆರ್ಕೈವ್, (2008), ಬೆಳಗಾವಿ ಜಿಲ್ಲೆಯ ಬೆಳವಾಡಿ ಮಲ್ಲಮ್ಮ ಅಂತರರಾಷ್ಟ್ರೀಯ ಇತಿಹಾಸದಲ್ಲಿ ಸ್ಥಾನ.
- ಆರ್ಕೈವ್, (2014), ಕರ್ನಾಟಕದಲ್ಲಿ ಪ್ರಾಮುಖ್ಯತೆಯ ಮಹಿಳೆಯರು,
- ದಿನೇಶ್. *ಬೆಳವಡಿ ಮಲ್ಲಮ್ಮ ಕನ್ನಡದ ಕೆಚ್ಚೆದೆ ರಾಣಿ.*
- ಜಗನಾಥ್. (2015). *ಬೆಳವಾಡಿ ಮಲ್ಲಮ್ಮ: ಕರ್ನಾಟಕದ ವೀರ ಮಹಿಳೆ.* ಸಪ್ನ ಬುಕ್ ಹೌಸ್
- Basavaraj S. Naikar. (2017). *The Rebellious Rani of Belavadi and Other Stories.* Sahitya Akademi Publication.


[5] ಅದೇ. ಪುಟ. 150.